**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 4551/2022**

**ಸಾಕ್ಷಿಗೆ ದಿನಾಂಕ 08.07.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಸೂಲ್ ಪಾಗವಾಲ್ | ಪಿ.ಡಬ್ಲ್ಯೂ-2<br>ಸಿ.ಡಬ್ಲ್ಯೂ-6 |
| ತಂದೆಯ/ಗಂಡನ ಹೆಸರು | : | ಲೇಟ್ ಅಬೂಬಕರ್ | |
| ವಯಸ್ಸು | : | 38 | |
| ಉದ್ಯೋಗ | : | ಪಿ ಎಸ್ ಐ | |
| ವಾಸಸ್ಥಳ | : | ಹಲ್ಲಹಳ್ಳಿ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈ ಪ್ರಕರಣಕ್ಕೆ ಸಂಬಂದಿಸಿದಂತೆ ನಾನು 2021 ರಿಂದ 2023 ರ ವರೆಗೆ ಹೆಚ್ ಕೋಟೆ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕೆಲಸ ನಿರ್ವಹಿಸಿರುತ್ತೇನೆ.

ದಿನಾಂಕ 06.11.2021 ರಂದು ನಾನು ಠಾಣೆಯಲ್ಲಿದ್ದಾಗ ಚಾಸಾ 1 ರವರು ನನ್ನನ್ನು ಮತ್ತು ಚಾಸಾ 4 ಮತ್ತು 5 ರವರನ್ನು ಕರೆಸಿ ಹೆಚ್ ಡಿ ಕೋಟೆ ಇಂದಿರಾ ಕ್ಯಾಂಟೀನ್ ಬಳಿ ಸರ್ಕಾರಿ ಜಾಗದಲ್ಲಿ ಇಬ್ಬರೂ ಅಸಾಮಿಗಳನು ಅಕ್ರಮಾವಾಗಿ ಮಧ್ಯವನ್ನು ಮಾರಾಟು ಮಾಡುತ್ತಿದ್ದಾರೆ ಎಂದು ಪೋನ್ ಮೂಲಕ ಅವರಿಗೆ ಮಾಹಿತಿ ಬಂದಿರುತ್ತದೆ. ಅದಕ್ಕಾಗಿ ದಾಳಿಗೆ ಹೋಗಲು ನಮಗೆ ಬರುವಂತೆ ತಿಳಿಸಿರುತ್ತಾರೆ ಅದೇ ಸಮಯದಲ್ಲಿ ಚಾಸಾ 1 ರವರು ಪಂಚರನ್ನು ಠಾಣೆಗೆ

ಬರಮಾಡಿಕೊಂಡು 9 ಗಂಟೆಗೆ ಎಲ್ಲಾರು ಮೇಲೆ ಹೇಳಿದ ಸ್ಥಳಕ್ಕೆ ನಮ್ಮ ಇಲಾಖಾ ವಾಹನದಲ್ಲಿ ಹೋಗಿರುತ್ತೇವೆ. ನಾವು ಸದರಿ ಸ್ಥಳಕ್ಕೆ ಹೋದಾಗ ಅಲ್ಲಿ ಇಬ್ಬರೂ ಅಪರಿಚಿತಿರು ಮದ್ಯವನ್ನು ಮಾರಾಟ ಮಾಡುತ್ತಿದ್ದರು. ನಂತರ ನಾನು ಆ ಇಬ್ಬರೂ ಆಸಾಮಿಗಳಲ್ಲಿ ಶ್ರೀನಿವಾಸ ಎಂಬುವರನ್ನು ಹಿಡಿದುಕೊಂಡಿರುತ್ತೇನೆ ಉಳಿದ ಸಿಬ್ಬಂದಿಗಳು ಹೋಬಳೆಗೌಡ ರವರನು ಹಿಡಿದುಕೊಂಡಿರುತ್ತಾರೆ. ನಾನು ಶ್ರೀನಿವಾಸ ರವರನ್ನು ಹಿಡಿದುಕೊಂಡು ಅವರ ಕೈಯಲ್ಲಿದ್ದ ಬ್ಯಾಗನ್ನು ಪರಿಶಿಲಿಸಿದಾಗ ಅವರ ಬ್ಯಾಗ್ ನಲ್ಲಿ ಒರಿಜಿನಲಿ ಚಾಯ್ಸ್ ಡಿಲಕ್ಸ್ ವಿಸ್ಕಿಯ 28 ಟೆಟ್ರಾ ಪ್ಯಾಕುಗಳ ಮೌಲ್ಯ ರೂ 980/-ಗಳು ಮತ್ತು ಅವರ ಬಳಿ 20 ಪ್ಲಾಸ್ಟಿಕ್ ಲೋಟಗಳು ಸಹ ದೊರಕಿರುತ್ತವೆ. ಮತ್ತು ಹೋಬಳೇಶ್ವರ ರವರ ಬಳಿ 27 ಒರಿಜಿನಲಿ ಚಾಯ್ಸ್ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕುಗಳು ಮತ್ತು 15 ಖಾಲಿ ಪ್ಲಾಸ್ಟಿಕ್ ಲೋಟಗಳು ಸಹ ದೊರಕಿರುತ್ತವೆ. ಅವರ ಬಳಿ ಇರುವ ವಿಸ್ಕಿಯ ಮೌಲ್ಯ ರೂ. 945/- ಗಳು ಇರುತ್ತವೆ. ನಂತರ ಚಾಸಾ 1 ರವರು ಅವರಿಗೆ ಮದ್ಯವನ್ನು ಮಾರಾಟ ಮಾಡಲು ಪರವಾನಿಗೆ ಇರುತ್ತದಯೇ ಎಂದು ಕೇಳಲಾಗಿ ಅವರ ಬಳಿ ಪರವಾನಿಗೆ ಇಲ್ಲ ಮತ್ತು ಅವರು ಮದ್ಯವನ್ನು ಅಕ್ರಮಾವಾಗಿ ಮಾರಾಟ ಮಾಡುತ್ತಿರುವ ಬಗ್ಗೆ ತಿಳಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ಅವುಗಳನ್ನು ಅಮಾನತ್ತು ಪಂಚನಾಮೆಯ ಮೂಲಕ ವಶಪಡಿಸಿಕೊಳ್ಳಲಾಗಿರುತ್ತದೆ. ಸದರಿ ಅಮಾನತ್ತು ಪಂಚನಾಮೆಯನ್ನು ಬೆಳಿಗ್ಗೆ 9.15 ರಿಂದ 10.15 ರ ವರೆಗೆ ಸ್ಥಳದಲ್ಲಿಯೇ ತಯಾರಿಸಲಾಗಿರುತ್ತದೆ. ನಂತರ ವಶಪಡಿಸಿಕೊಂಡ ಮದ್ಯದ ಪ್ಯಾಕೇಟುಗಳನ್ನು ಸಿ. ನಂ ಸಹ ಕೊಡಲಾಗಿರುತ್ತದೆ. ಶ್ರೀನಿವಾಸ ರವರ ಕಡೆಯಿಂದ ವಶಪಡಿಸಿಕೊಳ್ಳಲಾದ ಮದ್ಯದ ಪ್ಯಾಕೇಟುಗಳಿಗೆ 1 ರಿಂದ 28 ಎಂದು ನಂಬರನ್ನು ನೀಡಲಾಗಿರುತ್ತದೆ. ಹೊಬಳೆಗೌಡ ರವರ ಕಡೆಯಿಂದ ವಶಪಡಿಸಿಕೊಂಡ ಮದ್ಯದ ಟೆಟ್ರಾ ಪ್ಯಾಕುಗಳಿಗೆ 29 ರಿಂದ 55 ಎಂದು ನಂಬರನ್ನು ನೀಡಲಾಗಿರುತ್ತದೆ. ನಂತರ ಆರೋಪಿ ಮತ್ತು ಮಾಲುಗಳೊಂದಿಗೆ ಠಾಣೆಗೆ ಹಾಜರಾಗಿ ಚಾಸಾ 1 ರವರು ಚಾಸಾ 8 ರವರ ಮುಂದೆ ವರದಿಯನ್ನು

ನೀಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ 54 ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. 35 ಪ್ಲಾಸ್ಟಿಕ್ ಲೋಟಗಳನ್ನು ಮುದ್ದೆ ಮಾಲು 2 ಎಂದು ಗುರುತಿಸಲಾಯಿತು. 2 ಬ್ಯಾಗುಗಳನ್ನು ಮುದ್ದೆ ಮಾಲು 3 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ದಾಳಿಯ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಅಮಾನತ್ತು ಮಹಜರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಅಮಾನತ್ತು ಮಹಜರ್ ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 2 (ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಎನ್ ಎಸ್ ಜಿ ವಕೀಲರಿಂದಃ**

ದಿನಾಂಕ 06.11.2022 ರಂದು ನಾನು ದಾಳಿಯಲ್ಲಿ ಪಾಲ್ಗೊಂಡಿರುವ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದಿಸಲಾಗಿರುತದೆಯೇ ಎಂದರೆ ಸಾಕ್ಷಿಯು ಅದನ್ನು ಚಾಸಾ 1 ರವರು ನಮುದಿಸಿರುತ್ತಾರೆ ಎಂದು ನುಡಿಯಿುತ್ತಾರೆ. ಘಟನೆಯ ದಿನ ಠಾಣೆಯನ್ನು ಬೆಳಿಗ್ಗೆ 8.45 ಕ್ಕೆ ಬಿಟ್ಟಿರುತ್ತೇವೆ. ಠಾಣೆ ಯಿಂದ ಘಟನೆ ಯಾದ ಸ್ಥಳಕ್ಕೂ 900 ಮೀಟರ್ ಇರಬಹುದು. ಘಟನೆ ಸ್ಥಳ ಸಾರ್ವಜನಿಕರು ಓಡಾಡುವ ಸ್ಥಳ ವಾಗಿರುತ್ತದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಜನ ಸಂದಣಿ ಇರುತ್ತದೆ ಎಂದರೆ ಸರಿ. ಇಂದಿರಾ ಕ್ಯಾಂಟೀನ್ ವಯೋವೃದ್ದರು ಸಾಮಾನ್ಯರು ಹೋಗುತ್ತಾರೆ ಎಂದರೆ ಸರಿ. ದಾಳಿಯ ಸಮಯದಲ್ಲಿ ವೀಡಿಯೋಗ್ರಪಿ ಅಥವಾ ಪೋಟೋಗ್ರಪಿ ಮಾಡಲಾಗಿರುತ್ತದೆಯೇ ಎಂದರೆ ಅದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಘಟನೆ ಸ್ಥಳದಲ್ಲಿ ಹಾಜರಿದ್ದ ಸ್ಥಳೀಯರನ್ನು ಅಮನಾತ್ತು ಪಂಚನಾೆಮಯಲ್ಲಿ ಸಾಕ್ಷಿದಾರನ್ನಾಗಿ ತೋರಿಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಸ್ಥಳಿಯರು ಪಂಚರಾಗಿ ಬರಲು ಮುಂದೆ ಬರಲಿಲ್ಲ ಎಂದು

ನುಡಿಯುತ್ತಾರೆ. ನಿಪಿ 2 ರ ಮಹಜರನ್ನು ಯಾರು ಬರೆದಿರುತ್ತಾರೆ ಎಂದು ನನಗೆ ನೆನಪಿಲ್ಲ. ಮುದ್ದೆ ಮಾಲು 1 ಅನ್ನು ಎಲ್ಲಿಂದ ಖರೀದಿಸಲಾಗಿರುತ್ತದೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಮದ್ದೆ ಮಾಲು 1 ಅನ್ನು ಪರವಾನಿಗೆ ಇರುವಂತಹ ಮದ್ಯದ ಅಂಗಡಿಯಲ್ಲೆ ಖರೀದಿಸಾಲಾಗಿರುತ್ತದೆ ಎಂದರೆ ಸರಿ. ಎಂ ಒ 1 ರ ಟೆಟ್ರಾ ಪಾಕ್ ಗಳಿಗೆ ಪ್ರತಿಯೊಂದಿಗೆ ಬ್ಯಾಚ್ ನಂಬರ್ ಇರುತ್ತದೆ ಎಂದರೆ ಸರಿ ಅದನ್ನು ಮಹಜರಿನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ಹೇಳುವಂತೆ ಯಾವುದೇ ದಾಳಿಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಮುದ್ದೆ ಮಾಲುಗಳಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾದಿಕಾರಿಗಳ ಮಾತು ಕೇಳಿ ಠಾಣಾ ಅಂಕಿ ಅಂಶಗಳನ್ನು ತೋರಿಸುವ ಸುಳ್ಳು ಪ್ರಕರಣ ದಾಖಲು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಮುದ್ದೆ ಮಾಲು 3 ಅನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ಚೀಟಿಯನ್ನು ಅಂಟಿಸಿ ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮುದ್ದೆ ಮಾಲುಗಳಿಗೂ ಮತ್ತು ಆರೋೀಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ವಯೋವೃದ್ದರಾಗಿದ್ದು, ಇಂದಿರಾ ಕ್ಯಾಂಟೀನ್ ನಲ್ಲಿ ಊಟ ಮಾಡುತ್ತಿದ್ದವರನು ಈ ಪ್ರಕರಣದಲ್ಲಿ ಸುಳ್ಳಾಗಿ ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ